ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 21 ಗೃಹ - ಸಿ.ಡಿ. ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 26/3/2021

# ಅಪ್ಪ, ಅಮ್ಮನನ್ನು ರಕ್ಷಿಸಿದರೆ ಮಾತ್ರ ವಿಚಾರಣೆಗೆ ಬರುವೆ

## ಸೀಡಿ ಲೇಡಿಯಿಂದ ಎರಡನೇ ವಿಡಿಯೋ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 26/3/21

'ನನಗೆ ಹಂಡ್ರೆಡ್ ಪರ್ಸೆಂಟ್ ಗೊತ್ತು. ನನ್ನ ಅಪ್ಪ-ಅಮ್ಮ ಸ್ವಇಚ್ಛೆಯಿಂದ ದೂರು ಕೊಟ್ಟಿರಲು ಸಾಧ್ಯವೇ ಇಲ್ಲ. ನನ್ನ ಅಪ್ಪ-ಅಮ್ಮ ನೂರಕ್ಕೆ ನೂರರಷ್ಟು ಸುರಕ್ಷಿತವಾಗಿದ್ದಾರೆ ಎಂಬುದು ಖಚಿತವಾದ ತಕ್ಷಣವೇ ನಾನು ಎಸ್ಐಟಿ ಮುಂದೆ ವಿಚಾರಣೆಗೆ ಹಾಜರಾಗುತ್ತೇನೆ' ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿ.ಯಲ್ಲಿನ ಯುವತಿ ತಿಳಿಸಿದ್ದಾಳೆ.

ಅಲ್ಲದೆ, ಕೆಲ ದಿನಗಳ ಹಿಂದೆ ಪ್ರಕರಣದ ಸಂಬಂಧ ಎಸ್ಐಟಿಗೆ ತಾನು ಕಳುಹಿಸಿದ್ದ ವಿಡಿಯೋವನ್ನು ಅಧಿಕಾರಿಗಳು ರಮೇಶ್ ಜಾರಕಿಹೊಳಿ ಅವರಿಗೆ ಕೊಟ್ಟಿದ್ದಾರೆ. ಮರುದಿನ ಜಾರಕಿಹೊಳಿ ಅವರು ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದೂ ಆ ಯುವತಿ ಗಂಭೀರ ಆಪಾದನೆ ಮಾಡಿದ್ದಾಳೆ. ➤ 9



ಯುವತಿ ಎಲ್ಲಿದ್ದಾಳೆಂದು ತಿಳಿಸಿದರೆ ಅಲ್ಲೇ ಹೋಗಿ ರಕ್ಷಣೆ ನೀಡುತ್ತೇವೆ. ಪೋಷಕರಿಗೂ ರಕ್ಷಣೆ ನೀಡುತ್ತೇವೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಬಳಿ ಆಕೆ ಏಕೆ ರಕ್ಷಣೆ ಕೇಳಿದಳೋ ಗೊತ್ತಿಲ್ಲ.

• **ಬಸವರಾಜ ಬೊಮ್ಮಾಯಿ** ಗೃಹ ಸಚಿವ



ಮಾ.12ಕ್ಕೆ ನಮಗೆ ಯಾವುದೇ ವಿಡಿಯೋ ಬಂದಿಲ್ಲ. ನಮ್ಮನ್ನು ಯುವತಿ ಸಂಪರ್ಕಿಸಿಲ್ಲ. ರಕ್ಷಣೆ ನೀಡಲು ಸಿದ್ಧರಿದ್ದೇವೆ. ತನಿಖೆಗೆ ಆಕೆ ಸಹಕರಿಸಲಿ.

• **ಸೌಮೇಂದು ಮುಖರ್ಜಿ** ಎಸ್ಐಟಿ ಮುಖ್ಯಸ್ಥ

22

# ಅಪ್ಪ, ಅಮ್ಮನನ್ನು ರಕ್ಷಿಸಿದರೆ ಮಾತ್ರ ವಿಚಾರಣೆಗೆ

26/3/21

« ಮೊದಲ ಪುಟದಿಂದ

ಲೈಂಗಿಕ ಹಗರಣ ಬೆಳಕಿಗೆ ಬಂದ ನಂತರ ಕಳೆದ 23 ದಿನಗಳಿಂದ ಎಸ್‌ಐಟಿ ಹಾಗೂ ತನ್ನ ಕುಟುಂಬದ ಸದಸ್ಯರಿಗೂ ಸಿಗದೆ ಅಜ್ಞಾತ ಸ್ಥಳದಲ್ಲೇ ಆಶ್ರಯ ಪಡೆದಿರುವ ವಿವಾದಿತ ಯುವತಿ ಗುರುವಾರ ಎರಡನೇ ಬಾರಿಗೆ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿ ಸಂಚಲನ ಸೃಷ್ಟಿಸಿದ್ದಾಳೆ.

ಈ ಬಾರಿ ನೇರವಾಗಿ ಎಸ್‌ಐಟಿ ತನಿಖೆ ಬಗ್ಗೆ ಆಕೆ ತಕರಾರು ತೆಗೆದಿದ್ದು, ಎಸ್‌ಐಟಿ ಯಾರ ಪರವಾಗಿ ಕೆಲಸ ಮಾಡುತ್ತಿದೆ? ನಾನು ನೀಡಿದ ವಿಡಿಯೋ ಹೇಳಿಕೆಯನ್ನು ಮಾಜಿ ಸಚಿವರಿಗೆ ಪೊಲೀಸರು ಕೊಟ್ಟಿದ್ದಾರೆ ಎಂದು ಆರೋಪಿಸಿದ್ದಾಳೆ. ಲೈಂಗಿಕ ವಿವಾದ ಬೆಳಕಿಗೆ ಬಂದ ನಂತರ ತನ್ನ ಕುಟುಂಬಕ್ಕೆ ರಕ್ಷಣೆ ಇಲ್ಲವಾಗಿದೆ ಎಂದು ಆತಂಕ ವ್ಯಕ್ತಪಡಿಸಿರುವ ಆಕೆ, ತನ್ನ ಪರವಾಗಿ ದನಿ ಎತ್ತುವಂತೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಮತ್ತು ಮಹಿಳಾ ಸಂಘಟನೆಗಳಿಗೆ ಮನವಿ ಮಾಡಿದ್ದಾಳೆ. ಆದರೆ ಈ ವಿಡಿಯೋ ಬಿಡುಗಡೆ ಮೂಲದ ಬಗ್ಗೆ ತಲೆಕೆಡಿಸಿಕೊಂಡಿರುವ ಎಸ್‌ಐಟಿ, ಆಕೆಯ ಸಂಪರ್ಕ ಜಾಲವನ್ನು ಜಾಲಾಡುತ್ತಿದೆ ಎಂದು ತಿಳಿದು ಬಂದಿದೆ.

ಪ್ರಕರಣ ಬೆಳಕಿಗೆ ಬಂದ ಬಳಿಕ ಭೂಗತವಾಗಿದ್ದ ಯುವತಿ ಇದೇ ತಿಂಗಳ 13ರಂದು ವಿಡಿಯೋ ಹೇಳಿಕೆ ಬಿಡುಗಡೆ ಮೂಲಕ ಪ್ರಕರಣಕ್ಕೆ ರೋಚಕ ತಿರುವು ಕೊಟ್ಟಿದ್ದಳು. ಈಗ ಮತ್ತೆ 12 ದಿನಗಳ ಬಳಿಕ ಮತ್ತೊಂದು ಬಾರಿ ವಿಡಿಯೋ ಹೇಳಿಕೆ ಕೊಟ್ಟು ಆಕೆ ಕುತೂಹಲ ಹುಟ್ಟು ಹಾಕಿದ್ದಾಳೆ.

**ಯುವತಿ ಹೇಳಿದ್ದೇನು?:** 'ನನಗೆ ಹಂಡ್ರೆಡ್ ಪರ್ಸೆಂಟ್ ಗೊತ್ತು. ನಮ್ಮಪ್ಪ-ಅಮ್ಮ ಸ್ವಇಚ್ಛೆಯಿಂದ ಕಂಪ್ಲೇಟ್ ಕೊಟ್ಟಿರಲು ಸಾಧ್ಯವೇ ಇಲ್ಲ. ಏಕೆಂದರೆ ಅವರಿಗೆ ಗೊತ್ತು ನಮ್ಮ ಮಗಳೇನೂ ತಪ್ಪು ಮಾಡಿಲ್ಲ ಅಂತ. ನನಗೆ ನಮ್ಮಪ್ಪ- ಅಮ್ಮನ ಸೇಫ್ಟಿ ಮುಖ್ಯವಾಗಿದೆ. ಯಾವಾಗ 100ಕ್ಕೆ 100ರಷ್ಟು ಅವರು ಸುರಕ್ಷಿತವಾಗಿದ್ದಾರೆ ಎಂದು ಗೊತ್ತಾಗುತ್ತದೋ ಆಗಲೇ ನಾನು ಎಸ್‌ಐಟಿ ಮುಂದೆ ವಿಚಾರಣೆಗೆ ಬರುತ್ತೇನೆ. ಏನ್ ಸ್ಟೇಟ್‌ಮೆಂಟ್ ಕೊಡಬೇಕೋ, ಏನ್ ಪ್ರೊಸೀಜರ್ ಮುಗಿಸಬೇಕೋ ಅದೆಲ್ಲ ಮುಗಿಸುತ್ತೇನೆ. ಅದಕ್ಕಿಂತ ಮುಂಚಿತವಾಗಿ ಸಿದ್ದರಾಮಯ್ಯ ಅವರಿಗೆ, ಡಿ.ಕೆ. ಶಿವಕುಮಾರ್ ಅವರಿಗೆ ಹಾಗೂ ರಮೇಶ್ ಕುಮಾರ್ ಅವರಿಗೆ ಮತ್ತು ಇನ್ನಿತರ ಮಹಿಳಾ ಸಂಘಟನೆಗಳಿಗೆ ಇಷ್ಟೇ ಕೇಳಿಕೊಳ್ಳುತ್ತೇನೆ. ನಮ್ಮಪ್ಪ-ಅಮ್ಮ ಅವರಿಗೆ ರಕ್ಷಣೆ ಕೊಡಿ. ಅವರು ಎಲ್ಲೋ ಒಂದು ಕಡೆ ಸೇಫಾಗಲಿ. ನಾನು ಎರಡು ತಿಂಗಳಿಂದ ಎಲ್ಲೋ ಒಂದು ಕಡೆ ಹೋಗ್ತಾ ಇದ್ದೆ ನ್ಯಾಯ ಸಿಕ್ಕೇ ಸಿಗುತ್ತದೆ ಅಂತ. ನಾನು ಮಾ.12 ರಂದು ಒಂದು ವಿಡಿಯೋ ಮಾಡ್ಬಿಟ್ಟು ಪೊಲೀಸ್ ಆಯುಕ್ತರ ಕಚೇರಿ ಹಾಗೂ ಎಸ್‌ಐಟಿ ಅವರಿಗೆ ಕಳುಹಿಸಿದ್ದೆ. ಆದರೆ ಆ ವಿಡಿಯೋವನ್ನು ಅವರು ಮಾ.13ರಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರಿಗೆ ಕೊಟ್ಟಿದ್ದಾರೆ. ಹೀಗೆ ಕೊಟ್ಟ ಅರ್ಧ ಗಂಟೆಯಲ್ಲಿ ತರಾತುರಿಯಲ್ಲಿ ಪೊಲೀಸರಿಗೆ ಅವರು ದೂರು ಕೊಟ್ಟಿದ್ದಾರೆ. ಆನಂತರ ಎಸ್‌ಐಟಿಗೆ ನಾನು ಕೊಟ್ಟಿದ್ದ ವಿಡಿಯೋ ಬಹಿರಂಗವಾಗಿದೆ. ನನಗೆ ಅರ್ಥವಾಗುತ್ತಿಲ್ಲ, ಎಸ್‌ಐಟಿ ಯಾರ ಪರವಾಗಿ ಕೆಲಸ ಮಾಡುತ್ತಿದೆ ಅಂತ. ನಾನು ಕಿಡ್ನಾಪ್ ಆಗಿದ್ದೀನಿ ಅಂತ ನಮ್ಮಪ್ಪ- ಅಮ್ಮ ಕಂಪ್ಲೇಟ್ ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತು ನಮ್ಮಪ್ಪ- ಅಮ್ಮ ಸ್ವಯಂ ಇಚ್ಛೆಯಿಂದ ಕಂಪ್ಲೇಟ್ ಕೊಟ್ಟಿಲ್ಲ' ಎಂದು ಒಂದು ನಿಮಿಷ 13 ಸೆಕೆಂಡ್ ವಿಡಿಯೋದಲ್ಲಿ ವಿವಾದಿತ ಯುವತಿ ಹೇಳಿಕೆ ಕೊಟ್ಟಿದ್ದಾಳೆ.